# ದರ್ಶನ

ಶೈಕ್ಷಣಿಕ ವಾರ್ಷಿಕ - ಪತ್ರಿಕೆ.

94.814
SAT
2145

ಸಂಪುಟ ೩ ] ೨೬ ಜನೇವರಿ, ೧೯೭೦ [ ಸಂಚಿಕೆ ೩

❋ ಅರಿವೇ ಗುರು ❋

# ದರ್ಶನ

★

02145

894.81405
SAT

ಸಂಪಾದಕರು :

**ಲಿಂಗಣ್ಣ ಸತ್ಯಂಪೇಟೆ.**

**ಗುರುಬಸವಯ್ಯ ಹಿರೇಮಠ.**

★

**೨೬ ಜನೇವರಿ ೧೯೭೦.**

ಪ್ರಧಾನ ಸಲಹೆಗಾರರು :

**ಶ್ರೀ ಬಿ. ವ್ಹಿ. ಹಂಪನಗೌಡ್ರ**

ಎಂ. ಎ., ಎಂ. ಈಡಿ.

ತಾಲೂಕಾ ಶಿಕ್ಷಣಾಧಿಕಾರಿಗಳು,

ಸುರಪುರ.

ಪ್ರಕಾಶಕರು :

**ತಾಲೂಕಾ ಮಟ್ಟದ**

**ಶಾಲಾ ಸುಧಾರಣಾ ಸಮಿತಿ, ಸುರಪುರ.**

ಮುದ್ರಕರು:

ಶ್ರೀ ಅಮರನಾಥಸ್ವಾಮಿ,

ಶ್ರೀ ಶಿವಾನಂದ ಪವರ್ ಪ್ರಿಂಟರ್ಸ ಶಹಾಪೂರ.

* ಕನ್ನಡ ತಾಯ್ ಬಾಳ್ಗೆ *

★



ಬಾಳಿನ ಪ್ರತಿ ಅಂಗುಲ ಅಂಗುಲವನ್ನು, ನಿಷ್ಠೆ, ದುಡಿಮೆ,

ಪ್ರಾಮಾಣಿಕತೆಗಳಿಂದ ಸಾಗಿಸುತ್ತಿರುವ,

**"ಕವಿ ಕಾವ್ಯಾನಂದ"**

( ಶ್ರೀ ಸಿದ್ಧಯ್ಯ ಪುರಾಣಿಕ, I. A. S. )

ಅವರಿಗೆ

ಈ ಕುಡಿ

**ಅರ್ಪಿತ.**

—ಸಂ.

## " ಕಾವ್ಯಶ್ರೀ ಕಾವ್ಯಾನಂದ " ರಿಗೆ

# "ದರ್ಶನ"- ಮಾಲೆ ಸಮರ್ಪಣ

★

ಕಾಯಕದ ಸತ್ಕರ್ಮಯೋಗಿಯೆ ಕಾವ್ಯ–ಸರಸೀ–ಹಂಸನೆ
ಚತುರ ಪಂಡಿತ ಹೃದಯ ಮಂಡಿತ ವಿಬುಧ ನಿಕರೋತ್ತಂಸನೆ ॥
ಕಾವ್ಯ–ಗಂಗೆಯ ಹರಿಸಿರುವ ಶ್ರೀ ಕಲ್ಲಿನಾಥರ ಕಂದನೆ
ಸುರಸ ವಾಣಿಯ ಸರಸ ಕವಿವರ ಮಣಿವೆ " **ಕಾವ್ಯಾನಂದ**" ನೆ ॥೧॥

ಶರಣಮಣಿ ರಸಋಷಿಯೆ ಮಣಿಯುವೆ ನಿಮ್ಮ ನಿಲವು ಅಪಾರವು
ಎದೆಯ ಶಿವಕಾರುಣ್ಯವಿತರಣವದುವೆ ಬಾಳಿನ ಸಾರವು ॥
ಶುದ್ಧ ಕಾವ್ಯಾಮೃತವನೀಂಟಿಸಿ ಗೈದೆ ನರರ ದಿವೌಕಸ
ನೆಲದಿ ನಾಕಕೆ ಸೇತುಬಂಧನ, ಅನುಮ ಏನೀ ಸಾಹಸ ॥೨॥

ಕಾವ್ಯ " **ತ್ರಿಭುವನ ಮಲ್ಲ** " ನೆನಿಸಿದ ಭವ್ಯ " **ಭಾರತ ವೀರ** " ನೆ
ಮನುಜರೆದೆ " **ಮಾನಸ ಸರೋವರ** "ದೊಳಗೆ ಈಜಿದ ಧೀರನೆ ॥
ಸುಮದ ತೆರದಲಿ ಶಿವನ ಚರಣದಿ ಗೈದು ನೀ"**ನಾತ್ಮಾರ್ಪಣ**"
ವಿಬುಧ ಹೃದಯದ ವನಕೆ ಸುರಿದಿಹೆ ಕಾವ್ಯ–"**ಕರುಣಾಶ್ರಾವಣ**" ॥೩॥

ಕಬ್ಬದೋಂಟಕೆ ಸುರಿದು ಭಾವದಿ, ನವರಸದ " **ಜಲಪಾತ** " ವ
"**ಶರಣ ಚರಿತಾಮೃತ**"ವ ಹರಿಸುತೆ ಧರೆಯ ಗೈದೆ ಪುನೀತವ ॥
"**ಮೊದಲು ಮಾನವನಾಗು** " ನೀನೆಂದೊರೆದ ವಾಣಿಯ ಮರೆವೆವೆ ?
ಧನ್ಯತೆಗೆ " **ಶ್ರೀಕಾರ** " ಹಾಕಿದ " **ರಜತ ರೇಖೆ** " ಯ ತೊರೆವೆವೆ ? ॥೪॥

ಶರಧಿ ಶರಧಿಗೆ ಸಮವು ಗಗನಕೆ ಗಗನವೇ ಸಮವೆಂಬೆನು
ನಿಮ್ಮ ನಿಲವಿಗೆ ಹೃದಯದೊಲವಿಗೆ ಸಮವದೆಲ್ಲಿದೆ ? ನಂಬೆನು ॥
ಎದೆಯು ಕಾವ್ಯದ ನಿಧಿಯು ತಾ " **ಕಲ್ಲೋಲ ಮಾಲೆ** " ಯ ಸಾಗರ
ವಿಧಿಯ ಕುಂಚವ ಕಸಿದ ಕೋವಿದ, ಕವಿಗಣಾಂಬುಜ ಭಾಸ್ಕರ ॥ ೫ ॥

ಕಲುಷ ಕಳೆಯುವ ಪರುಷದೋಲಿದೆ ನಿಮ್ಮ ಪ್ರತಿಭೆಯ ಧೋರಣೆ
ಭೂಮಿ–ವ್ಯೋಮದ ಸಹಜ ಮಿಲನದ ಐಕ್ಯತೆಯ ಸತ್ಪ್ರೇರಣೆ ॥
ಬಾನ ಹಲಗೆಯಮೇಲೆ ಬರೆದಿಹ ಚಿಕ್ಕೆಯಕ್ಕರದಂದದಿ
ಅಮಿತಮೋಹಕವಾಗಿ ಹರಿಸುವೆ ಭಾವನೆಯ ಸ್ವಚ್ಛಂದದಿ ॥ ೬ ॥

ಪರಮ " **ಕಾವ್ಯಶ್ರೀ** " ಯೆ ಮೆರೆದಿಹೆ ಕಾವ್ಯ–ತತ್ತ್ವವನೊರೆದಿಹೆ
ಮಣ್ಣಮಕ್ಕಳ ಕಣ್ಣು ತೆರೆಸಿಹೆ ಶಾಂತಿ ಕಹಳೆಯ ಮೊರೆದಿಹೆ ॥
ನಿಜವ ಬಿಂಬಿಪ ನಿಮ್ಮ ಜೀವನ ರತ್ನಮಯ ನವ ದರ್ಪಣ
ಶಿಕ್ಷಕಾವಳಿ ಸಮೆದ " **ದರ್ಶನ** "– ಮಾಲೆ ನಿಮಗೆ ಸಮರ್ಪಣ ॥ ೭ ॥

**ಎ. ಕೃಷ್ಣ ಸುರಪುರ,**
ಸಹಶಿಕ್ಷಕ, ಉ. ಪ್ರಾ. ಶಾ. ಅರಣಕಲ್.
ತಾ॥ ಚಿತಾಪೂರ.

---